ಧಾರವಾಡ ಜಿಲ್ಲೆಯಲ್ಲಿ ವಿದ್ಯಾರ್ಥಿ ನಿಲಯಗಳ ಕಟ್ಟಡ ಕಾಮಗಾರಿ ಕೆಲಸ ಮುಗಿಸಿದ್ದರು ಪ್ರಾರಂಭವಾಗದಿರುವುದು

227 (238) ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ (ಕಲಘಟಗಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಇಲಾಖೆವತಿಯಿಂದ ಧಾರವಾಡ ಜಿಲ್ಲೆಯಲ್ಲಿ ನೂತನವಾಗಿ ಮಂಜೂರಾಗಿರುವ ವಿದ್ಯಾರ್ಥಿ ನಿಲಯಗಳೆಷ್ಟು (ಬಾಲಕ ಮತ್ತು ಬಾಲಕಿಯರ) ಮಾಹಿತಿ ನೀಡುವುದು*

ಆ) ಸದರಿ ಸ್ಥಳಗಳಲ್ಲಿ ವಿದ್ಯಾರ್ಥಿ ನಿಲಯಗಳ ಕಟ್ಟಡಗಳು ಸಂಪೂರ್ಣವಾಗಿ ಕಾಮಗಾರಿ ಕೆಲಸ ಪೂರ್ಣಗೊಂಡಿದೆಯೇ ಎಲ್ಲೆಲ್ಲಿ ವಿವರ ನೀಡುವುದು

ಇ) ಈ ವಿದ್ಯಾರ್ಥಿ ನಿಲಯಗಳಲ್ಲಿ ಹೊಸದಾಗಿ ಮಂಜೂರಾಗಿರುವ ವಿದ್ಯಾರ್ಥಿ ನಿಲಯ ಸ್ಥಳಗಳಾವುವು

ಈ) ಸದರಿ ವಿದ್ಯಾರ್ಥಿ ನಿಲಯದ ಕಟ್ಟಡ ಕೆಲಸ ಮುಗಿದಿದ್ದರೂ ಉದ್ಘಾಟನೆ ಮಾಡದಿರುವ ಔಚಿತ್ಯವೇನು,

ಉ) ಈ ಕಟ್ಟಡಗಳನ್ನು ಯಾವ ಇಲಾಖೆಯ ಯಾವ ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿತ್ತು ಇದು ಆ ಭಾಗದ ಜನಪ್ರತಿನಿಧಿಗಳಿಗೆ ಮಾಹಿತಿಯನ್ನು ಇಲಾಖೆ ನೀಡದಿರುವುದು ನಿಜವೇ ವಿವರ ನೀಡುವುದು

ಊ) ಉದ್ಘಾಟನೆ ಕಾರ್ಯ ಯಾವಾಗ ಮಾಡಲಾಗುತ್ತದೆ

ಶ್ರೀ ಎ ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) 2002–03 ಮತ್ತು 2003–04 ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಮತ್ತು ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಯಾವುದೇ ಹೊಸ ವಿದ್ಯಾರ್ಥಿ ನಿಲಯಗಳು ಮಂಜೂರಾಗಿರುವುದಿಲ್ಲ

ಆ) ಧಾರವಾಡ ಜಿಲ್ಲೆಯಲ್ಲಿ ಕಾಮಗಾರಿ ಪೂರ್ಣಗೊಂಡಿರುವ ಮತ್ತು ಪ್ರಗತಿಯಲ್ಲಿರುವ ವಿದ್ಯಾರ್ಥಿನಿಲಯಗಳ ವಿವರಗಳನ್ನು ಅನುಬಂಧ–1, ಮತ್ತು 2 ರಲ್ಲಿ ಲಗತ್ತಿಸಲಾಗಿದೆ

ಇ) ಉದ್ಭವಿಸುವುದಿಲ್ಲ

ಈ), ಉ) ಮತ್ತು ಊ) ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ರಾಜ್ಯವಲಯ ಹಾಗೂ ಜಿಲ್ಲಾವಲಯದಡಿ ಒದಗಿಸಿಕೊಳ್ಳಲಾಗುತ್ತಿದೆ ಹಿಂದುಳಿದ ವರ್ಗಗಳ ಇಲಾಖೆಯ ಕಟ್ಟಡಗಳ ಕಾಮಗಾರಿಗಳನ್ನು ಹುಡ್ಕೋ ಸಾಲದ ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿರುತ್ತದೆ ಈ ಯೋಜನೆಗಳಡಿ ಪೂರ್ಣಗೊಂಡ ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ಉದ್ಘಾಟನೆಯನ್ನು ಅತೀ ಶೀಘ್ರದಲ್ಲಿ ಮಾಡಲಾಗುವುದು

ಅನುಬಂಧ–1

ಧಾರವಾಡ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ಕಟ್ಟಡಗಳ ನಿರ್ಮಾಣದ ಕಾಮಗಾರಿಯ ವಿವರಗಳು

(ರೂ ಲಕ್ಷಗಳಲ್ಲಿ)

ಕ್ರ ಸಂ	ವಿದ್ಯಾರ್ಥಿನಿಲಯದ ಹೆಸರು ಹಾಗೂ ಸ್ಥಳ	ತಾಲ್ಲೂಕು	ಅನು ಮೋದಿತ	ಬಿಡುಗಡೆ ಯಾದ	ಕಾಮಗಾರಿಯ ಭೌತಿಕ ಸ್ಥಿತಿ	ನಿರ್ಮಾಣದ ಏಜೆನ್ಸಿ
		ಜಿಲ್ಲಾವಲಯದಡಿ ಕೈಗೊಂಡಿರುವ ಕಾಮಗಾರಿಗಳು				
1	ಸರ್ಕಾರಿ ಮೆ ನಂತರದ ಬಾಲಕರ ವಿ ನಿಲಯ ಸಪ್ತಾಪುರ, ಧಾರವಾಡ	ಧಾರವಾಡ	21 400	18 298	ನೆಲಮಹಡಿ ಕಟ್ಟಡ ಕೆಲಸ ಪೂರ್ಣಗೊಂಡಿರುತ್ತದೆ	ಕರ್ನಾಟಕ ಭೂಸೇನಾ ನಿಗಮ
		ರಾಜ್ಯವಲಯದಡಿ ಕೈಗೊಂಡಿರುವ ಕಾಮಗಾರಿಗಳು				
2	ಸರ್ಕಾರಿ ಮೆ ನಂತರದ ಬಾಲಕಿಯರ ವಿ ನಿಲಯ ಸೈದಾಪುರ, ಧಾರವಾಡ	ಧಾರವಾಡ	48 900	48 900	ಕಾಮಗಾರಿ ಮುಕ್ತಾಯ ಗೊಂಡಿದ್ದು ಸಣ್ಣಪುಟ್ಟ ಕೆಲಸ ಬಾಕಿ ಇರುತ್ತದೆ	ಕರ್ನಾಟಕ ಭೂಸೇನಾ ನಿಗಮ
3	ಸ ಮೆಟ್ರಿಕ್ ಪೂ ಬಾಲಕರ ವಿ ನಿಲಯ ಕುಂದಗೋಳ	ಕುಂದಗೋಳ	22 750	22 750	ಗಿಲಾವು ಕೆಲಸ ಪ್ರಗತಿಯಲ್ಲಿದೆ	–"–
4	ಸರ್ಕಾರಿ ಮೆ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಜೇವೂರು	ನವಲಗುಂದ	25 310	14 000	ಪಾಯದ ಹಂತದಲ್ಲಿದೆ	–"–
5	ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ನವಲಗುಂದ	ನವಲಗುಂದ	24 320	24 320	ವಿದ್ಯುತ್ ಮತ್ತು ಡ್ರೈನೇಜ್ ವ್ಯವಸ್ಥೆ ಕಲ್ಪಿಸಬೇಕಾಗಿದೆ	–"–
		ಜಿಲ್ಲಾವಲಯದಡಿ ಪೂರ್ಣಗೊಂಡ ಸ್ಥಳೀಯ ಶಾಸಕರಿಂದ ಉದ್ಘಾಟನೆಯಾಗಿರುವ ಕಾಮಗಾರಿ				
6	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಮಿಶ್ರಿ ಕೋಟೆ	ಕಲಘಟಗಿ	30 000	29 560		

ಅನುಬಂಧ –2

ಕ್ರಮ ಸಂಖ್ಯೆ	ವಿದ್ಯಾರ್ಥಿ ನಿಲಯದ ಹೆಸರು ಮತ್ತು ಸ್ಥಳ	ಅಂದಾಜು ವೆಚ್ಚ ರೂ ಲಕ್ಷಗಳಲ್ಲಿ	ಕಟ್ಟಡ ಮುಕ್ತಾಯವಾಗಿರುವ ದಿನಾಂಕ
1	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಹುಬ್ಬಳ್ಳಿ	25 77	15 9 2003
2.	ಮೆಟ್ರಿಕ್ ನಂತರ ಬಾಲಕಿಯರ ನಿಲಯ ಹುಬ್ಬಳ್ಳಿ	39 52	15 9 2003
3	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಹರಳಿಕಟ್ಟೆ	24 54	3 10 2003
4.	ಮೆಟ್ರಿಕ್ ನಂತರ ವೃತ್ತಿಪರ ಬಾಲಕರ ವಿದ್ಯಾರ್ಥಿ ಧಾರವಾಡ	68 24	ಕಾಮಗಾರಿಯು ಮುಕ್ತಾಯವಾಗಿದ್ದು ವಿದ್ಯುತ್‌ಚ್ಛಕ್ತಿ ಸರಬರಾಜು ಪೂರೈಸಬೇಕಾಗಿದೆ
5	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ನೂಲ್ವಿ	17 13	ಕಾಮಗಾರಿಯು ಮುಕ್ತಾಯವಾಗಿದೆ

ಮೀನುಗಾರಿಕೆಯ ಇಲಾಖೆಯಲ್ಲಿ ಉಂಟಾಗಿರುವ ನಷ್ಟ

228 (569) ಶ್ರೀ ಗುರುಸ್ವಾಮಿ ಎ ಎಸ್ (ಚಾಮುಂಡೇಶ್ವರಿ) ಮಾನ್ಯ ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 2 ವರ್ಷಗಳಿಂದ ಮಂಗಳೂರು ಹಾಗೂ ಕಾರವಾರ ಬಂದರುಗಳಲ್ಲಿ ರಾಜ್ಯದ ಸರಕುಗಳನ್ನು ಎಷ್ಟು ಪ್ರಮಾಣದಲ್ಲಿ ರಫ್ತು ಮಾಡಲಾಗಿದೆ ಇದರ ಮೊತ್ತವೆಷ್ಟು

ಆ) ಹೊರದೇಶದಿಂದ ಯಾವ ಪ್ರಮಾಣದಲ್ಲಿ ವಸ್ತುಗಳನ್ನು ವಿದೇಶಿ ಹಡಗುಗಳು ತಂದಿರುತ್ತದೆ ಮೊತ್ತವೆಷ್ಟು

ಇ) ಹಡಗುಗಳಿಂದ ಬಂದ ವಸ್ತುಗಳನ್ನು ಇಳಿಸಲಾಗಿದೆಯೇ ಸರಿಯಾದ ಸಮಯಕ್ಕೆ ಡಿಸ್‌ಎಂಬಾರ್ಡ್‌ಮೆಂಟ್ ಮಾಡದೇ ನಷ್ಟ ಉಂಟಾಗಿದೆಯೆ ಯಾವ ಪ್ರಮಾಣದಲ್ಲಿ

ಈ) ವಿದೇಶದಿಂದ ಹೊತ್ತು ತಂದ ವಸ್ತುಗಳು ಅನುಪಯುಕ್ತವಾಗಿದೆಯೇ ಯಾವ ಪ್ರಮಾಣದಲ್ಲಿ

ಉ) ಕಾರವಾರ ಹಾಗೂ ಮಂಗಳೂರು ಬಂದರಿನಲ್ಲಿ ಯಾವ ಪ್ರಮಾಣದಲ್ಲಿ ಮೀನನ್ನು ರಫ್ತು ಮಾಡಲಾಗಿದೆ ಸರ್ಕಾರಕ್ಕೆ ಎಷ್ಟು ಪ್ರಮಾಣದಲ್ಲಿ ಆದಾಯ ಬಂದಿದೆಯೇ ಮೊತ್ತವಷ್ಟು?

ಶ್ರೀ ವಸಂತ ವಿ ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು)

ಅ) ಹಳೇ ಮಂಗಳೂರು ಬಂದರು (ಹಡಗುಗಳ ಮುಖಾಂತರ)